ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಂದಾಯ – ಆರ್ಥಿಕ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 14/10/20

# ರಾಜ್ಯಕ್ಕೆ ₹ 9,018 ಕೋಟಿ ಜಿಎಸ್‌ಟಿ ಸಾಲ ಬಿಡುಗಡೆ

ನವದೆಹಲಿ: ಕೊರೊನಾ, ಲಾಕ್‌ಡೌನ್ ಅವಧಿಯ ಆದಾಯ ಕೊರತೆ ಸರಿದೂಗಿಸುವ ಸಂಬಂಧ ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡಿದ್ದ 'ಸಾಲ'ದ ಅವಕಾಶದ ಅನ್ವಯ 20 ರಾಜ್ಯಗಳಿಗೆ 68,825 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ಈ ಮೊತ್ತದಲ್ಲಿ ರಾಜ್ಯಕ್ಕೆ 9,018 ಕೋಟಿ ರೂ. ಸಾಲದ ರೂಪದಲ್ಲಿ ಸಿಗಲಿದೆ. ಈ ಮೊತ್ತವನ್ನು 20 ರಾಜ್ಯಗಳು ಮುಕ್ತ ಮಾರುಕಟ್ಟೆಯಲ್ಲಿ ಸಾಲದ ರೂಪದಲ್ಲಿ ಪಡೆಯಲಿವೆ. ಕೇಂದ್ರ ಹಣಕಾಸು ಸಚಿವಾಲಯ ಈ ಬಗ್ಗೆ ಅಧಿಕೃತವಾಗಿ ಪ್ರಕಟಣೆ ಹೊರಡಿಸಿದೆ.

ಸೋಮವಾರವಷ್ಟೇ ಜಿಎಸ್‌ಟಿ ಮಂಡಳಿ ಸಭೆ ನಡೆದಿದ್ದು, ಬಿಜೆಪಿಯೇತರ ರಾಜ್ಯಗಳು ಸಾಲ ಪಡೆಯಲು ಅಸಮ್ಮತಿ ಸೂಚಿಸಿದ್ದವು. ಆದರೆ, ಈಗಾಗಲೇ 20 ರಾಜ್ಯಗಳು ಕೇಂದ್ರ ಸರ್ಕಾರ ನೀಡಿದ್ದ ಆಯ್ಕೆ 1ರಂತೆ ಸಾಲ ಪಡೆಯಲು ಒಪ್ಪಿಗೆ ನೀಡಿವೆ. ಬಿಜೆಪಿ ಸರ್ಕಾರೇತರ ರಾಜ್ಯಗಳ ಪ್ರತಿರೋಧದ ಹೊರತಾಗಿಯೂ ಕೇಂದ್ರ ಸರ್ಕಾರ, ಬಿಜೆಪಿ ಮತ್ತು ಮಿತ್ರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಹಣ ಬಿಡುಗಡೆ ಮಾಡಿದೆ. ಅಚ್ಚರಿಯೆಂದರೆ, ಬಿಜೆಪಿಯೇತರ ರಾಜ್ಯವಾದ ಮಹಾರಾಷ್ಟ್ರ ಕೂಡ ಆಯ್ಕೆ 1ಕ್ಕೆ ಒಪ್ಪಿಕೊಂಡು 15,394 ಕೋಟಿ ರೂ. ಸಾಲ ಪಡೆದಿದೆ.

## ಆಯ್ಕೆ 1ರ ಅಡಿ ಸಿಗುವ ಸವಲತ್ತು

1. ಕೇಂದ್ರ ಹಣಕಾಸು ಸಚಿವಾಲಯ ವಿಶೇಷ ಸಾಲ ಗವಾಕ್ಷಿಯನ್ನು ರೂಪಿಸಿದೆ. ಇದು ಆದಾಯ ಕೊರತೆಯನ್ನು ಸಾಲದ ರೂಪದಲ್ಲಿ ನೀಗಿಸಲಿದೆ. ರಾಜ್ಯಗಳ ಒಟ್ಟಾರೆ ಆದಾಯ ಕೊರತೆ 1.1 ಲಕ್ಷ ಕೋಟಿ ರೂ.ಗಳಷ್ಟಾಗಲಿದೆ ಎಂದು ಅಂದಾಜಿಸಲಾಗಿದೆ.
2. ಶೇ.2ರಷ್ಟು ಹೆಚ್ಚುವರಿ ಸಾಲಕ್ಕೂ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ಈ ಪೈಕಿ ಜಿಎಸ್‌ಡಿಪಿಯ ಶೇ.0.5 ರಷ್ಟು ಅಂತಿಮ ಕಂತನ್ನು ಪಡೆಯಲೂ ಅವಕಾಶ ಕಲ್ಪಿಸಲಾಗಿದೆ.